# ತ್ರಿಕೋನ ಕಾದಂಬರಿಯಲ್ಲಿನ ಸ್ತ್ರೀಸಂಕಥನ

**ಸಿದ್ದರಾಜು ಎಸ್. ಪಿ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಭಾಗ, ಮಹಾರಾಜ ಕಾಲೇಜು
ಮೈಸೂರು.

ಕನ್ನಡ ಸಾಹಿತ್ಯ ಚರಿತ್ರೆಯ ಹಿನ್ನಲೆಯಾಗಿ, ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳ ಪ್ರಭಾವ ಉಂಟಾಗಿದೆ. ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಪಾಶ್ಚಿಮಾತ್ಯ ಭಾಷೆ, ಸಂಸ್ಕೃತಿ, ಸಾಹಿತ್ಯ ಕೃತಿಗಳ ಪ್ರಭಾವ–ಪ್ರೇರಣೆ ಅಗಾಧವಾಗಿ ಆಗಿದೆ. ಕನ್ನಡ ಸಾಹಿತ್ಯದ ಹಿನ್ನಲೆಯಲ್ಲಿ ಪುರಾತನ–ಆಧುನಿಕ, ದೇಶಿಯ–ವಿದೇಶಿಯ, ಸಮಾಜ–ಸಂಸ್ಕೃತಿಗಳ ಸಂಘರ್ಷ ನಿರಂತರವಾಗಿ ನಡೆದು ಸಾಹಿತ್ಯ ಸಂಸ್ಕೃತಿಯಲ್ಲಿ ಸೇರಿದೆ. ಕನ್ನಡ ಭಾಷೆ ಹೊಸ ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಾ, ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತಾ ಸಾಹಿತ್ಯ ಕ್ಷೇತ್ರವನ್ನು ಗಟ್ಟಿಗೊಳಿಸಿದೆ.

ಹೊಸಗನ್ನಡ ಸಾಹಿತ್ಯ ರೂಪಗಳಾದ ಕಾವ್ಯ, ಕಾದಂಬರಿ, ನಾಟಕ, ಸಣ್ಣಕತೆ, ಲಲಿತ ಪ್ರಬಂಧ, ಸಾಹಿತ್ಯ ವಿಮರ್ಶೆ, ಆತ್ಮಕಥೆ, ಜೀವನ ಚರಿತ್ರೆ, ಮುಂತಾದ ರೂಪಗಳು ಆಧುನಿಕ ಸಂವೇದನೆಯ ರೂಪ ಪಡೆದಿವೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯಗಳೆಂಬ ಸಾಹಿತ್ಯ ಪ್ರಕಾರಗಳು ರಚನೆಯಾದವು.

ರಾಷ್ಟ್ರದ ಪರಿಕಲ್ಪನೆಯೊಂದಿಗೆ ಆಯಾ ಸಮಾಜದಲ್ಲಿ ನಿರುದ್ಯೋಗ, ಜಾತಿ ಅಸಮಾನತೆ, ಅನಿಷ್ಟ ಪದ್ಧತಿಗಳು, ಮೂಢನಂಬಿಕೆ, ಲಿಂಗತಾರತಮ್ಯ ಮುಂತಾದ ಸಾಮಾಜಿಕ ಸಮಸ್ಯೆಗಳ ವಿರುದ್ಧ ಪ್ರತಿಭಟನೆಯ ರೂಪವಾಗಿ ಸಾಹಿತ್ಯ ರಚನೆಯಾಗತೊಡಗಿತು. 12ನೇ ಶತಮಾನದ ವಚನಕಾರ್ತಿಯರಿಂದ ಆರಂಭಗೊಂಡ ಮಹಿಳಾಸಾಹಿತ್ಯ ಸ್ತ್ರೀಪರ ಚಿಂತನೆಗಳನ್ನು ಕೇಂದ್ರವಾಗಿಸಿಕೊಂಡು ಚಾಲನೆಗೊಂಡಿತು. ಅನೇಕ ಮಹಿಳಾ ಲೇಖಕಿಯರು ಸಾಹಿತ್ಯವನ್ನು ಸೃಜಿಸುವ ಮೂಲಕ ಮಹಿಳೆಯರ ವೈಯಕ್ತಿಕ ತಕಲಾಟಗಳು, ನೋವು–ಸಂಕಟಗಳನ್ನು, ದುಗುಡ–ದುಮ್ಮನಗಳನ್ನು, ಪುರುಷ ಸಮಾಜದಿಂದ ಆಕೆಗೆ ಆಗಿರುವ ಅನ್ಯಾಯವನ್ನು ಎತ್ತಿಹಿಡಿದು ಸಮಾನತೆಯನ್ನು ಸಾರುವ ಸಾಹಿತ್ಯ ಕೃತಿಗಳು ರಚನೆಯಾದವು.

ಮಹಿಳಾ ಪರವಾದ ಕಾದಂಬರಿ ಸಾಹಿತ್ಯ ಹತ್ತೊಂಬತ್ತು, ಇಪ್ಪತ್ತನೆ ಶತಮಾನದಲ್ಲಿ ಆರಂಭಗೊಂಡು, ಅದು 21ನೇ ಶತಮಾನದಲ್ಲಿ ಮುಂದುವರಿದಿದೆ. ಪುರುಷ ಲೇಖಕರು ಸ್ತ್ರೀ ಕೇಂದ್ರಿತ ಕಾದಂಬರಿಗಳನ್ನ ರಚಿಸಿದ್ದಾರೆ ಹಾಗು ಸ್ತ್ರೀ ಸಂವೇದನೆಯನ್ನು ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕನ್ನಡದ ಪ್ರಮುಖ ಲೇಖಕರಲ್ಲಿ ಒಬ್ಬರಾದ ನಾ. ಡಿಸೋಜ ಅವರು ಸ್ತ್ರೀಪರ ಚಿಂತನೆ, ಧೋರಣೆ, ಸಂವೇದನೆಗಳನ್ನ ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ.

ನಾ. ಡಿಸೋಜ ಅವರ ತ್ರಿಕೋನ ಕಾದಂಬರಿ 1968ರಲ್ಲಿ ಕೆಂಪು ತ್ರಿಕೋನ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಅನಂತರ ತ್ರಿಕೋನ ಎಂದು ಹೆಸರು ಬದಲಾಯಿಸಿಕೊಂಡು ಬಂದಿರುವ ಈ ಕಾದಂಬರಿಯು ಗಂಡು–ಹೆಣ್ಣಿನ ಸ್ನೇಹ–ಸಂಬಂಧ, ವೈದ್ಯ–ಕಾಂಪೌಂಡರ್–ನರ್ಸ್‌ಗಳ ಕಥೆ ಹಾಗೂ ಲೈಂಗಿಕತೆ ಎಂಬುದು ಅವರನ್ನು ಕಾಡುವ ಪರಿಯ ಒಂದು ಕಥೆ. ಮಕ್ಕಳನ್ನು ಪಡೆಯುವ, ಕುಟುಂಬ ಯೋಜನೆಯನ್ನು ಅನುಸರಿಸುವಲ್ಲಿ ಧರ್ಮ, ಸಂಸ್ಕೃತಿಗಳು ಜನರ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ, ಇದರಿಂದ ಮಹಿಳೆಯರು ಎಷ್ಟೆಲ್ಲಾ ನೋವು–ಸಂಕಟವನ್ನು ಅನುಭವಿಸುತ್ತಾರೆ ಎಂಬುದನ್ನು ಕಾದಂಬರಿ ಬಿಂಬಿಸುತ್ತದೆ.

ಡಾ. ಮಾಲಾ ಅಂದಿನ ಕಾಲದ ಆದರ್ಶ ಮಹಿಳೆಯಾಗಿ, ಡಾಕ್ಟರ್ ಆಗಿ ಕಂಡುಬರುತ್ತಾಳೆ. ಜನರ ಸೇವೆಗೆ ತನ್ನ ಜೀವನವನ್ನು ಮುಡಿಪಾಗಿಟ್ಟು ಮದುವೆ ಎಂಬ ಸಾಮಾಜಿಕ ಕಟ್ಟುಪಾಡಿನಿಂದ ದೂರ ಉಳಿದ ದಿಟ್ಟ ಮಹಿಳೆ. ಮದುವೆ ಎಂದರೆ 'ದೈಹಿಕ ಆಸೆಗಳನ್ನು ತೀರಿಸಿಕೊಳ್ಳುಲು ಇರುವ ಒಂದು ಸಾಮಾಜಿಕ ಸಂಬಂಧ' ಎಂದು ತಿಸ್ಕರಿಸಿ ಮತ್ತೊಂದು ಭಾರಿ 'ಒಂದು ಗಂಡು–ಒಂದು ಹೆಣ್ಣಿನ ಪ್ರೀತಿಯ ಸಮಾಗಮವೇ ಮದುವೆ' ಎಂದು ಭಾವಿಸುವ ಮಾಲಾ, ತಂದೆಯ ಒತ್ತಾಯವನ್ನ ಮೊದಲು ತಿಸ್ಕರಿಸಿದರೂ ಚಂದ್ರಶೇಖರನನ್ನು ನೋಡಿದಾಗ ಅವಳ ಮನದಲ್ಲಿ ಭಾವನೆಗಳು ಚಿಗುರಿ ಮದುವೆಗೆ ಒಪ್ಪುತ್ತಾಳೆ. ಆದರೆ ಚಂದ್ರು ಬೆಂಗಳೂರಿನ ನರ್ಸ್ ಜೊತೆ ಹೊಂದಿದ್ದ ಸಂಬಂಧ, ಆಕೆಗೆ ಮಗುವಾಗಿರುವ ವಿಷಯವನ್ನು ಆಕೆಯೇ ಬಂದು ಹೇಳಿದಾಗ, ತಾನು ಈವರೆಗೂ ಅಂದುಕೊಂಡಿದ್ದಂತೆ ಮದುವೆಯೆಂಬ ವೈಯಕ್ತಿಕ ಜೀವನದಿಂದ ದೂರ ಸರಿದು ವೈದ್ಯಳಾಗಿ ಜನರ ಸೇವೆಗೆ ತನ್ನ ಜೀವನವನ್ನು ಮುಡಿಪಾಗಿಡಲು ಸಿದ್ಧಳಾಗುತ್ತಾಳೆ. ಒಬ್ಬ ಮಹಿಳೆ ಸಾಂಸಾರಿಕ ಜೀವನದಿಂದ ವಿಮುಕ್ತಳಾಗಿ, ಜನರ ಸೇವೆಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದು ಸಾಮಾನ್ಯ ವಿಷಯವಲ್ಲ, ಅಂತಹ ನಿರ್ಧಾರವನ್ನು ತೆಗೆದುಕೊಂಡು ಹಾಗೆಯೇ ಬದುಕಿ ತೋರಿಸಿದ ದಿಟ್ಟ ಮಹಿಳೆ ಮಾಲಾ.

ಇದಕ್ಕೆ ಆದರ್ಶವಾಗಿ ಡಾ. ತರೇಜ ಅವಳ ಕಣ್ಣಮುಂದೆ ಕಂಡುಬರುತ್ತಾರೆ. ರೋಗಿಗಳ ಸೇವೆ ದೇವರ ಪ್ರಾರ್ಥನೆ ಇವೆರಡನ್ನೇ ತನ್ನ ಜೀವನದ ಮುಖ್ಯ ಉದ್ದೇಶವಾಗಿಸಿಕೊಂಡು ಕುಟುಂಬವನ್ನು ತೊರೆದು ಚರ್ಚ್‌ನಲ್ಲಿ ಉಳಿದಿರುವ ತೆರೇಜ ಅವರನ್ನು ನೋಡಿ "ನಮ್ಮ ಸಮಾಜದಲ್ಲೂ ನಿಮ್ಮ ಹಾಗೆ ಬದುಕಿ ಜನಸೇವೆ ಮಾಡೋ ಅವಕಾಶ ಇದ್ದಿದ್ರೆ ನಾನು ನುಮ್ಮ ಹಾಗೆ ಆಗ್ತಿದ್ದೇನೋ"(ಪು.ಸಂ.37. ತ್ರಿಕೋನ) ಎನ್ನುವ ಮಾತಿನಲ್ಲಿ ನಮ್ಮ ಸಮಾಜದಲ್ಲಿರುವ ಧಾರ್ಮಿಕ ಭಿನ್ನತೆಗಳನ್ನು ತಿಳಿಸುತ್ತದೆ.

ಸ್ತ್ರೀಯ ಮೇಲಿನ ಪುರುಷನ ದಬ್ಬಾಳಿಕೆ ಶೋಷಣೆ ಪುರಾತನ ಕಾಲದಿಂದಲೂ ನಡೆದು ಬಂದಿರುವಂತಹದ್ದೇ, ಚಂದ್ರು ಪ್ರಫುಲ್ಲನೊಂದಿಗೆ ಹೊಂದಿದ್ದ ಸ್ನೇಹ ಸಂಬಂಧ ವ್ಯವಹಾರ, ಮಾಲಾ ಸಿಕ್ಕ ಮೇಲೆ ಆಕೆಯನ್ನು ದೂರತಳ್ಳಿ ಒಂದಿಷ್ಟು ಹಣವನ್ನು

ನೀಡುವುದಾಗಿ ಹೇಳುತ್ತಾನೆ. ಚಂದ್ರಶೇಖರನ ಈ ರೀತಿಯ ವಂಚನೆಯಿಂದ ಆಕೆ ಆತ್ಮಹತ್ಯೆಗೆ ಮುಂದಾಗಿ ಕೊನೆಗೆ ಮಾಲಾಳನ್ನು ಭೇಟಿ ಮಾಡಿದಾಗ ಆಕೆಗೆ ಮತ್ತೆ ತನ್ನ ಜೀವನ ಸಿಕ್ಕಿದಂತಾಗುತ್ತದೆ

ಧಾರ್ಮಿಕ ನೀತಿಗಳು, ಸಂಪ್ರದಾಯಗಳು ಸಾಮಾಜಿಕ, ಕೌಟುಂಬಿಕ ಪದ್ಧತಿಗಳು ಸ್ತ್ರೀಯನ್ನು ಶೋಷಣೆಗೆ ಒಳಗುಮಾಡುತ್ತಿವೆ. ಮಗುವನ್ನು ಪಡೆಯುವುದು, ಎಷ್ಟು ಮಗುಬೇಕು ಎಂಬುದು ತಂದೆ–ತಾಯಿಗಳಿಗೆ ಸಂಬಂಧಿಸಿದ ವಿಷಯ. ಆದರೆ ಅಂತೋನಿಯ ಪತ್ನಿ ಜಿಲ್ಲಿಬಾಯಿಯ 8ನೇ ಮಗು ತಾಯಿಯನ್ನು ಉಳಿಸಿ ತಾನು ಹೊಟ್ಟೆಯಲ್ಲೆ ಸತ್ತು ಬಂದಾಗ. ಡಾ. ಮಾಲಾ ಕುಟುಂಬ ಯೋಜನೆಯನ್ನು ಅನುಸರಿಸುವಂತೆ ಹೇಳುತ್ತಾಳೆ. ಆದರೆ ಅದು ತಮ್ಮ ಧರ್ಮಕ್ಕೆ ವಿರೋಧವಾದದ್ದು ಎಂದು ಹೇಳಿ ತಿರಸ್ಕರಿಸುತ್ತಾನೆ. ಕುಟುಂಬ ಯೋಜನೆ ದೇವದ್ರೋಹ ಎಂಬ ಪಾದರಿಗಳ ಪ್ರವಚನ ಕೇಳಿ ಅಂತೋನಿಗೆ ಸರಿ ಎನಿಸುತ್ತದೆ. ದೇವರು ಧರ್ಮದಲ್ಲಿ ನಂಬಿಕೆಯಿಟ್ಟಿದ್ದ ಅಂತೋನಿ ಕುಟುಂಬ ಯೋಜನೆಯನ್ನು ಅನುಸರಿಸುವುದಿಲ್ಲ. ಜಿಲ್ಲಿಬಾಯಿ ಮತ್ತು ಅಂತೋನಿಯ ವೈಯಕ್ತಿಕ ವಿಷಯದಲ್ಲಿ ಹೊರಗಿನ ವ್ಯಕ್ತಿ–ಶಕ್ತಿಗಳು ಕೈಹಾಕುತ್ತಾರೆ. ಇದು ಕೇವಲ ಅಂತೋನಿಯ ವಿಷಯದಲ್ಲಿ ಮಾತ್ರವಲ್ಲ ಎಲ್ಲಾ ಕ್ರೈಸ್ತ ಧರ್ಮಿಯರ ಆಂತರಿಕ ವಿಷಯ ಆದರೆ ಇದರಿಂದ ಬಲಿಪಶುಗಳಾಗುತ್ತಿರುವುದು ಜಿಲ್ಲಿಬಾಯಿಯಂತಹ ಮಹಿಳೆಯರು. ಡಾ. ಮಾಲಾ ಜಿಲ್ಲಿಬಾಯಿಯ ಜೀವಕ್ಕೆ ಅಪಾಯವಿರುವುದ್ದನ್ನು ಮೊದಲೇ ತಿಳಿಸಿದರೂ ಕೂಡ ಧರ್ಮಾಂಧನಾದ ಅಂತೋನಿ ಮೈಮರೆಯುತ್ತಾನೆ.

ಒಂದು ಮಗುವಿಗೆ ಜನ್ಮ ನೀಡುವುದು ತಾಯಿಗೆ ಅದು ಪುನರ್ ಜನ್ಮ ಪಡೆದಂತೆ ಹೆರಿಗೆಯ ಸಂದರ್ಭದಲ್ಲಿ ನೋವು ತಾಳಲಾರದೇನೆ ಎಷ್ಟೋ ಜನ ಹೆಣ್ಣು ಮಕ್ಕಳು ಸತ್ತಿದ್ದಾರೆ. ಹೆರಿಗೆ ಹೆಂಗಸರಿಗೆ ಒಂದು ಗಂಡಾಂತರ, ಆದರೂ ಹೆಣ್ಣಿನ ಜೀವನದ ಒಂದು ಅತ್ಯಮೂಲ್ಯವಾದ ಪಟ್ಟಕ್ಕಾಗಿ ತೆರೆದುಕೊಳ್ಳುವ ಹೊಸ ಬಾಗಿಲು ಇದು. ಆ ನೋವು–ನರಳಾಟ ಏನೇ ಇರಲಿ ತಾನು ತಾಯಿಯಾದರೆ ಸಾಕು ಎಂದು ಹಂಲಿಸುತ್ತಾಳೆ ಹೆಣ್ಣು. ಸಾವಿತ್ರಿಯೂ ಕೂಡ ಈ ರೀತಿಯ ಹಂಬಲದಿಂದ ನಟರಾಜನಿಗೆ ತಿಳಿಯದಾಗೆ ಆತನಿಂದ ಮಗುವನ್ನು ಪಡೆದು ತಾಯಿ ಆಗುತ್ತಾಳೆ.

ಅಂದಿನ ಕಾಲದಲ್ಲಿ ಮಕ್ಕಳು ದೇವರು ಕೊಟ್ಟವರವೆಂದು ಭಾವಿಸುವ ಸಮಾಜ, ಅದರಿಂದ ಸ್ತ್ರೀ ಅನುಭವಿಸುವ ಯಾತನೆಯನ್ನು ಅರಿಯುವುದಿಲ್ಲ. ಪುರುಷ ಮಹಿಳೆಯನ್ನು ಮಗುವನ್ನು ಹೆರುವ ಒಂದು ಯಂತ್ರವಾಗಿ ಬಳಸಿಕೊಂಡಿದ್ದಾನೆ. ಪ್ರತಿ ಮಗುವಿಗೆ ಜನ್ಮ ನೀಡಿದಾಗಲೂ ದುರ್ಬಲಳಾಗುವ ಜಿಲ್ಲಿಯ ನೋವು ಸಂಕಟ ಅಂತೋನಿ ತಿಳಿಯನು. ಜಿಲ್ಲಿಯ ಮಗು ಹಾಲು ಕುಡಿಯಲು ಎದೆ ಮೇಲೆ ಕೈಯಾಡಿಸಿದಾಗ "ಅಲ್ಲಿ ಏನಿದೆ ಅಂತ ಕೂಗಾಡ್ತೀಯ, ಹೀರಿ ಹೀರಿ ನನ್ನ ಕೊಂದು ಹಾಕಬೇಕು ಅಂತಾನ?", (ಪು.ಸಂ.77. ತ್ರಿಕೋನ) ಎನ್ನುವಾಗ ಆಕೆಯ ಬಡಜೀವದ ನೋವು ಯಾತನೆ ಮನಕಲಕುತ್ತದೆ.

ಮದುವೆಯಾದ ಹೊಸತರದಲ್ಲಿ ದಷ್ಟಪುಷ್ಟವಾಗಿದ್ದ ಜಿಲ್ಲಿ 8 ಮಕ್ಕಳನ್ನು ಹೆತ್ತು ಸೊರಗಿ ಹೋಗಿದ್ದಾಳೆ. ಮತ್ತೊಂದು ಮಗುವನ್ನು ಪಡೆದರೆ ಆಕೆಯ ಜೀವಕ್ಕೆ ಅಪಾಯ ಎಂಬುದನ್ನು ಮಾಲಾ ಅಂತೋನಿಗೆ ಹೇಳಿದಾಗ, ಧರ್ಮ ವಿರೋಧಿ ಎಂದು ನಿರಾಕರಿಸುತ್ತಾನೆ. ಮತ್ತೆ ತಾಯಿಯಾದರೆ ಜಿಲ್ಲಿ ಉಳಿಯುವುದಿಲ್ಲವೆಂದು ತಿಳದಿದ್ದ ಅಂತೋನಿ ಅವಳಿಂದ ದೂರ ಉಳಿಯುತ್ತಾನೆ, ಆದರೆ ಹಬ್ಬದ ದಿನ ಕುಡಿದ ಅಮಲಿನಲ್ಲಿ ಆಕೆಯನ್ನು ಸೇರುತ್ತಾನೆ, ಮತ್ತೆ ತಾಯಿಯಾಗುತ್ತಾಳೆ. 8 ತಿಂಗಳು ಇರುವಾಗಲೇ ಹೊಟ್ಟೆ ನೋವು ಬಂದು ಪ್ರಾಣವನ್ನು ಬಿಡುತ್ತಾಳೆ. ಧರ್ಮ ಸಂಸ್ಕೃತಿಗಳು ಸಹ ಹೆಣ್ಣಿನ ಪಾಲಿಗೆ ಮುಳ್ಳಾಗಿ ಆಕೆಯ ಶೋಷಣೆಗೆ ಕಾರಣವಾಗುತ್ತದೆ.

ಕಾದಂಬರಿಯಲ್ಲಿ ಬರುವ ನಟರಾಜ ಒಬ್ಬ ಕ್ರೂರ ವ್ಯಕ್ತಿಯಾಗಿ ಕಂಡುಬರುತ್ತಾನೆ. ಹೆಣ್ಣನ್ನು ಒಂದು ಭೋಗವಸ್ತುವಾಗಿ, ತಾನು ಹೇಳಿದಂತೆ ಕೇಳಿಕೊಂಡು, ತನ್ನ ಆಸೆ ಆಕಾಂಕ್ಷೆಗಳನ್ನು ಹಿಡೇರಿಸುವ ಒಂದು ವಸ್ತುವೆಂದು ಭಾವಿಸುವ ಪಶುಸ್ವಭಾವದ ಈತ ಮಡದಿಯೆಂದರೆ ದಡ್ಡರು, ಪುರುಷರ ಅಡಿ ಆಳು ತನ್ನ ಕಾಮವನ್ನು ತೀರಿಸಿಕೊಳ್ಳಲು ಇರುವ ಭೋಗವಸ್ತು ಎಂದು ತಿಳಿದಿರುವ ನಟರಾಜ, ಸಾವಿತ್ರಿಯನ್ನು ಮದುವೆಯಾಗಿ ಆಕೆಗೆ ನರಕಯಾತನೆಯನ್ನು ನೀಡುತ್ತಾನೆ. "ಹೊರಗೆ ಎಲ್ಲೆಲ್ಲೋ ಹೋಗಿ ತೀಟೆ ತೀರಿಸಿಕೊಂಡು ಬರೋದರ ಜೊತೆಗೆ ರೋಗಾಣು ತರೋದು ಬೇಡ ಅಂತ ನಿನ್ನ ಮದ್ವೆ ಆದೆ", ಎನ್ನುವ ಆತನ ಮಾತು ಹೆಣ್ಣಿನ ಮೇಲಿನ ಅಗೌರವ, ಆತನ ಕ್ರೂರತನ ಅಮಾನವೀಯತೆಯನ್ನು ತಿಳಿಸುತ್ತದೆ.

ತನ್ನ ತಾಯಿಯನ್ನು ಸೇರಿದಂತೆ ಇಡೀ ಸ್ತ್ರೀಕುಲದ ಬಗ್ಗೆ ನಕಾರಾತ್ಮಕ ಭಾವನೆಯನ್ನು ಹೊಂದಿರುವ ವಿಕೃತ ಕಾಮಿಯಾದ ನಟರಾಜನ ವಿರುದ್ಧ ಧ್ವನಿಎತ್ತಿ ಆತನನ್ನು ಬಿಟ್ಟು ಬರುತ್ತಾಳೆ. ಸ್ತ್ರೀ ಮಗುವನ್ನು ಪೊರೆಯುವ ಹೊರುವ ವಿಶಿಷ್ಟ ಶಕ್ತಿಯನ್ನು ಹೊಂದಿರುವವಳು. ಮಗುವನ್ನು ಪಡೆಯುವುದು ಆಕೆಯ ಇಚ್ಛೆ ಮಹಿಳೆಯು ಪುರುಷನ ಹಾಗೆ ಮನುಷ್ಯಳು, ಆಕೆ ಆತನಂತೆ ಭಾವನೆಗಳನ್ನು ಆಸೆ ಆಕಾಂಕ್ಷೆಯನ್ನು ಹೊಂದಿರುವವಳು.

ಮಾಲಾ ತಂದೆಯನ್ನು ಕಳೆದುಕೊಂಡು ಎಲ್ಲರಿಂದ ದೂರ ಉಳಿದು ಜನರ ಸೇವೆಯಲ್ಲಿ ನಿರತಳಾದಾಗ ನಿರ್ಮಲಳನ್ನು ರೈಲಿನಲ್ಲಿ ಭೇಟಿಯಾಗಿ ಅವಳ ಮಕ್ಕಳನ್ನು ನೋಡಿದಾಗ, ವಿನೋದ್ ಕುಟುಂಬವನ್ನು ನೋಡಿದಾಗ ತಾನು ಒಂಟಿ "ಬದುಕಿರುವವರೆಗೂ ಜನಸೇವೆಯೊಂದೇ ನನ್ನ ಗುರಿಯಾಗಿರಲಿ ಎಂದು ಬಯಸಿದೆ. ಡಾಕ್ಟರ್ ತೆರೇಜ ಕನ್ಯಾಸ್ತ್ರೀಯಾಗಿಯೇ ಉಳಿದು ಸಾಧಿಸಬಹುದಾದನ್ನು ತಾನು ಹೀಗೆ ಸಾಧಿಸುವ ಪಣತೊಟ್ಟೆ, ಸಾಧಿಸಿಯೂ ಸಾಧಿಸಿದೆ. ಆದರೆ ಈ ಒಂದು ಕೊರತೆ ತನ್ನನ್ನು ಭಾಧಿಸುತ್ತಿದೆ. ತಾನು ಒಂಟಿಯಗಿಯೇ ಉಳಿಯಬೇಕೆ?", ಎಂಬ ಭಾವನೆ ಆಕೆಯನ್ನು ಕಾಡತೊಡಗಿತು. ಸುಕುಮಾರ್‌ನನ್ನು ನೋಡಿದಾಗ ಆಕೆಯ ಮನದ ಆಸೆಗಳು ಚಿಗುರೊಡೆದು ಆತನನ್ನು ಪ್ರೀತಿಸತೊಡಗಿದಳು. ಆತನಿಂದ ಮಗುವನ್ನು ಪಡೆಯಬೇಕು ತಾಯಿಯಾಗಬೇಕು ಎಂಬ ವಯೋಸಹಜ ಆಸೆಗಳು ಅವಳ ಮನದಲ್ಲಿ ಮೂಡಿ ನಿಂತವು. ಆದರೆ ಸುಕುಮಾರ್ ತನ್ನ ದೌರ್ಬಲ್ಯವನ್ನು ಹೇಳಿಕೊಂಡಾಗ ಆಕೆಯ ಆಸೆ ಭಗ್ನವಾಯಿತು. ಮಾಲಾ ಜನಸೇವೆಯಲ್ಲಿ ಮುಂದುವರೆದಳು.

ಆಸ್ಪತ್ರೆಯ ಸಿಬ್ಬಂದಿಗಳನ್ನು ಲೈಂಗಿಕತೆ ಎನ್ನುವುದು ಕಾಡುವ ಪರಿ. ಇದನ್ನು ಮೆಟ್ಟಿನಿಂತು ಜನಸೇವೆಗೆ ಆದ್ಯತೆ ನೀಡಿದ ತೆರೇಜ ಮಾಲಾರಂತ ವ್ಯಕ್ತಿತ್ವಗಳು ಎಲ್ಲರಲ್ಲೂ ಗೌರವ ಭಾವನೆಯನ್ನು ತರುತ್ತದೆ. ಕಾಂಪೌಂಡರ್ ಅಂತೋನಿ ವೈದ್ಯಕೀಯ ಕ್ಷೇತ್ರದಲ್ಲಿ ಇದ್ದನಾದರೂ ಧಾರ್ಮಿಕ ನೀತಿಗೆ ಕಟ್ಟುಬಿದ್ದು ಕುಟುಂಬ ಯೋಜನೆಯನ್ನು ಅನುಸರಿಸದೆ ತನ್ನ ಹೆಂಡತಿ ಜಿಲ್ಲಿಯ ಸಾವಿಗೆ ಕಾರಣನಾಗುತ್ತಾನೆ. ಅಂತೋನಿ ಒಬ್ಬ ವಿದ್ಯಾವಂತ, ವೈದ್ಯಕೀಯದ ಬಗ್ಗೆ ತಿಳಿದಿರುವಾತ ತನ್ನ ಹೆಂಡತಿಯ ಪ್ರಾಣಕ್ಕೆ ಅಪಾಯವಿದ್ದರೂ ಧರ್ಮವನ್ನು ಬಿಡಲಿಲ್ಲ. ಪಿತೃಸತ್ತಾತ್ಮಕ ವ್ಯವಸ್ಥೆ ಗಂಡಿಗೆ ಕೊಟ್ಟ ಯಜಮಾನಿಕೆ, ಅಧಿಕಾರ, ಆತ ಮಹಿಳೆಯ ಬದುಕಿನ ಮೇಲೆ ಮಾಡುವ ಹಸ್ತಕ್ಷೇಪ, ಮಹಿಳೆಯನ್ನು ತನ್ನ ಸಹಜೀವಿ ಎಂದು ಗುರುತಿಸುದಕ್ಕೆ ನಿರಾಕರಿಸುವ ಮನೋಧರ್ಮ, ಅವಳ ಮೇಲೆ ನಡೆಸುವ ಕ್ರೌರ್ಯ, ದೌರ್ಜನ್ಯ ದಬ್ಬಾಳಿಕೆ ನಟರಾಜನ ಕ್ರೂರ ವ್ಯಕ್ತಿತ್ವದ ಮೂಲಕ ಕಾದಂಬರಿ ತೆರೆದಿಡುತ್ತದೆ.

**ಆಕರ ಗ್ರಂಥ**

1. ತ್ರಿಕೋನ – ನಾ ಡಿಸೋಜ, ಮು. 2013, ಪ್ರ.–ರವೀಂದ್ರ ಪುಸ್ತಕಾಲಯ ಶಿವಮೊಗ್ಗ.

**ಪರಾಮರ್ಶನ ಗ್ರಂಥಗಳು**

1. ಆರ್ದ್ರಗರ್ವದ ಹುಡುಗಿ – ಎಂ ಎಸ್ ವೇದಾ.
2. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ – ಸಂ. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ.
3. ನಾ. ಡಿಸೋಜ ಎಂಬ ಶಾರವತಿಯ ನಾಲ್ಕು ಜಲಧಾರೆ – ಡಾ. ಸರ್ಫ್ರಾಜ್ ಚಂದ್ರಗುತ್ತಿ.
4. ಕನ್ನಡದ ನಾಡಿ ಡಾ. ನಾ. ಡಿಸೋಜ – ವಿಲಿಯಂ.